ಈ ಮೊತ್ತದಲ್ಲಿ ಈ ಜಿಲ್ಲಾ ಮುಖ್ಯ ರಸ್ತೆಯನ್ನು ಬಲಪಡಿಸುವ, ಆಯ್ದ ಭಾಗಗಳನ್ನು ಅಗಲಪಡಿಸುವ, ಜೆಲ್ಲಿ ಬಚಾವಣೆ, ಡಾಂಬರೀಕರಣ, ಮರು ಡಾಂಬರೀಕರಣ ಹಾಗೂ ಸೇತುವೆ ಮತ್ತು ಅಡ್ಡ ಮೋರಿಗಳ ದುರಸ್ತಿ : ನಿರ್ಮಾಣ ಕೆಲಸಗಳನ್ನು ಮಾಡಲಾಗಿರುತ್ತದೆ.

3. ಪ್ರಸಕ್ತ 2000-2002ನೇ ಸಾಲಿನಲ್ಲಿ ಈ ಜಿಲ್ಲಾ ಮುಖ್ಯ ರಸ್ತೆಯ ಆಯ್ದ ಭಾಗಗಳಲ್ಲಿ ಅಗಲಗೊಳಿಸಿ ಜೆಲ್ಲಿ ಬಚಾವಣೆ ಮಾಡುವುದು, ಮರುಡಾಂಬರೀಕರಣಗೊಳಿಸುವುದು ಹಾಗೂ ವಾರ್ಷಿಕ ದುರಸ್ತಿಯ ಕೆಲಸಗಳಾದ ಚರಂಡಿ ತೋಡುವುದು, ಗುಂಡಿ ಮುಚ್ಚುವುದು, ಇತ್ಯಾದಿಗಾಗಿ ರೂ.18.70 ಲಕ್ಷಗಳನ್ನು ಕಾಯ್ದಿರಿಸಲಾಗಿರುತ್ತದೆ.

4. ಸದರಿ ಸೇತುವೆ ಕಾಮಗಾರಿಯು ಎಲ್ಲಾ ವಿಧದಲ್ಲೂ ಪೂರ್ಣಗೊಂಡಿದೆ.

ಶಿವಮೊಗ್ಗದಲ್ಲಿ ನೋಂದಣಿ ಆಗಿರುವ ಸಂಸ್ಥೆಗಳ ಬಗ್ಗೆ.

ಚುಕ್ಕೆ ಗುರುತಿಲ್ಲದ LA ಪ್ರಶ್ನೆ ಸಂಖ್ಯೆ : 716(328)

ಸದಸ್ಯರ ಹೆಸರು : ಶ್ರೀ ಚಂದ್ರಶೇಖರಪ್ಪ ಹೆಚ್.ಎಂ.(ಶಿವಮೊಗ್ಗ)

ಉತ್ತರಿಸುವ ಸಚಿವರು : ಶ್ರೀ ಹೆಚ್.ಸಿ.ಶ್ರೀಕಂಠಯ್ಯ(ಕಂದಾಯ ಸಚಿವರು)

ಪ್ರಶ್ನೆ

ಅ) ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಸಂಸ್ಥೆಗಳು ನೋಂದಣಿ ಆಗಿವೆ?

ಆ) ಇವುಗಳಲ್ಲಿ ನವೀಕರಣ ಆಗದೆ ಇರುವ ಸಂಸ್ಥೆಗಳ ಸಂಖ್ಯೆ ಎಷ್ಟು? ಸರ್ವ ಸದಸ್ಯರ ಸಭೆಯನ್ನು ನಿಗಧಿತ ಸಮಯಕ್ಕೆ ನೆಡೆಸದೇ ಇರುವ ಸಂಸ್ಥೆಗಳೆಷ್ಟು? (ವಿವರ ನೀಡುವುದು)

ಉತ್ತರ

ಅ) 2052

ಆ) 1933

ಯಾವುದೇ ಸಂಸ್ಥೆಯು ಸರ್ವಸದಸ್ಯರ ಸಭೆಯನ್ನು ನಡೆಸದಿದ್ದರೆ ಆಗ ಸಂಸ್ಥೆಯನ್ನು ನವೀಕರಿಸುವುದು ಸಾಧ್ಯವಿಲ್ಲ.

ಪಟ್ಟಿಯನ್ನು ಒದಗಿಸಲು 15 ದಿನಗಳ ಕಾಲಾವಕಾಶ ಕೋರಲಾಗಿದೆ.

ಶಿವಮೊಗ್ಗ ವಿಧಾನಸಭಾ ಕ್ಷೇತ್ರದಲ್ಲಿ ರಾಷ್ಟ್ರೀಯ ಹೆದ್ದಾರಿ ರಸ್ತೆ ಡಾಂಬರೀಕರಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 717(329)

ಸದಸ್ಯರ ಹೆಸರು : ಶ್ರೀ ಹೆಚ್.ಎಂ.ಚಂದ್ರಶೇಖರಪ್ಪ(ಶಿವಮೊಗ್ಗ)

ಉತ್ತರಿಸುವ ಸಚಿವರು : ಶ್ರೀ ಧರ್ಮಸಿಂಗ್(ಲೋಕೋಪಯೋಗಿ ಸಚಿವರು)

ಪ್ರಶ್ನೆ

ಅ) ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ಕಿಲೋಮೀಟರ್ ರಾಷ್ಟ್ರೀಯ ಹೆದ್ದಾರಿ ರಸ್ತೆ ಡಾಂಬರೀಕರಣ ಮಾಡಲಾಗಿದೆ? ಇದುವರೆವಿಗೂ ಖರ್ಚು ಮಾಡಿದ ಹಣವೆಷ್ಟು? ವಿವರ ನೀಡುವುದು.

ಉತ್ತರ

ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದಲ್ಲಿ ರಾಷ್ಟ್ರೀಯ ಹೆದ್ದಾರಿ-13 (ಸೊಲ್ಲಾಪುರ-ಮಂಗಳೂರು ರಸ್ತೆ) ಕಿ.ಮೀ.519 ರಿಂದ 551ರವರೆಗೆ (32 ಕಿ.ಮೀ) ಮತ್ತು ರಾಷ್ಟ್ರೀಯ ಹೆದ್ದಾರಿ 206(ತುಮಕೂರು-ಹೊನ್ನಾವರ ರಸ್ತೆ) ಕಿ.ಮೀ. 197 ರಿಂದ 248ರವರೆಗೆ (51 ಕಿ.ಮೀ.), ಒಟ್ಟು 83 ಕಿ.ಮೀ. ಹಾಯ್ದು ಹೋಗುತ್ತವೆ.

ಇದರಲ್ಲಿ ರಾ.ಹೆ. 206ರ ವಾಹನ ಸಂಚಾರ ಪಥವನ್ನು ರೂ.387 ಲಕ್ಷ ವೆಚ್ಚ ಮಾಡಿ 32 ಕಿ.ಮೀ. ಅಭಿವೃದ್ಧಿಪಡಿಸಲಾಗಿದೆ. ವಿವರಗಳು ಈ ಕೆಳಗಿನಂತಿವೆ.

ರಾಷ್ಟ್ರೀಯ ಹೆದ್ದಾರಿ 206ರ ಅಭಿವೃದ್ಧಿಗೆ

1. 1999-2000ನೇ ಸಾಲಿನಲ್ಲಿ ಕಿ.ಮೀ. 197 ರಿಂದ 206 ರವರೆಗೆ (9 ಕಿ.ಮೀ.) ಆಗಿರುವ ವೆಚ್ಚ ರೂ.110.00 ಲಕ್ಷಗಳು.

2. 1999-2000ನೇ ಸಾಲಿನ ಕಿ.ಮೀ.245 ರಿಂದ 248 ರವರೆಗೆ (3 ಕಿ.ಮೀ.) ಆಗಿರುವ ವೆಚ್ಚ ರೂ.22.00 ಲಕ್ಷಗಳು